**Prajavaani**

Date: 11-05-2019 | Page No: 03

Edition: Mysuru | Language: Kannada

# ಪಿಸಿಸಿಎಂ ಕೋರ್ಸ್‌ಗೆ ಮಾನ್ಯತೆ

ಪ್ರಜಾವಾಣಿ ವಾರ್ತೆ

ಮೈಸೂರು: ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ (ಎಸ್‌ಡಿಎಂ–ಐಎಂಡಿ) ಸಂಸ್ಥೆಯು ಆರಂಭಿಸಿರುವ 15 ತಿಂಗಳ ಅವಧಿಯ ಪೋಸ್ಟ್ ಗ್ರಾಜುಯೇಟ್ ಸರ್ಟಿಫಿಕೇಟ್ ಇನ್ ಮ್ಯಾನೇಜ್ಮೆಂಟ್ (ಪಿಜಿಸಿಎಂ) ಕೋರ್ಸ್‌ಗೆ ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಷನ್ (ಎಐಸಿಟಿಇ) ಮಾನ್ಯತೆ ನೀಡಿದೆ.

ಹಲವು ದೃಷ್ಟಾಂತಗಳು, ಯೋಜನೆಗಳು, ಪ್ರಾಯೋಗಿಕ ದೃಷ್ಟಿಕೋನಗಳನ್ನು ಉಪಯೋಗಿಸಿ, ನಿರ್ವಹಣಾ ವಿಷಯದ ಬಗ್ಗೆ ಆಸಕ್ತರಿಗೆ ಆಳವಾಗಿ ಕಲಿಸುವ ಉದ್ದೇಶದಿಂದ ಈ ಹೊಸ ಕಾರ್ಯಕ್ರಮವನ್ನು ರೂಪುಗೊಳಿಸಲಾಗಿದೆ. ಸಂಸ್ಥೆಯ ಪ್ರಮುಖ ಕಾರ್ಯಕ್ರಮವಾದ ಎರಡು ವರ್ಷ ಅವಧಿಯ ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ ಕೋರ್ಸ್ ವಿದ್ಯಾರ್ಥಿಗಳಿಗೆ ಒದಗಿಸುವ ಎಲ್ಲ ಸೌಲಭ್ಯಗಳು, 'ಪಿಜಿಸಿಎಂ' ವಿದ್ಯಾರ್ಥಿಗಳಿಗೆ ಸಹ ದೊರೆಯಲಿವೆ ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ವಿವರಗಳಿಗೆ www.sdmimd.ac.in/pgcm/ ವೀಕ್ಷಿಸಬಹುದು.